ಡಬಲ್ ಡೆಕ್ಕರ್ ಮೇಲ್ಸೇತುವೆ ಉದ್ಘಾಟನೆ ವಿಳಂಬ: ಆಕ್ರೋಶ

ಬೆಂಗಳೂರು: ನಗರದಲ್ಲಿ ಮೊದಲ 'ಡಬಲ್ ಡೆಕ್ಕರ್ ಮೇಲ್ಸೇತುವೆ' ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದರೂ ಅದರ ಉದ್ಘಾಟನೆ ವಿಳಂಬವಾಗುತ್ತಿರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ 3.3 ಕಿಮೀ ಉದ್ದದ ಡಬಲ್ ಡೆಕ್ಕರ್ ಮೇಲ್ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ. ಎಲ್ಲ ಕಾಮಗಾರಿ ಪೂರ್ಣಗೊಂಡಿದ್ದರೂ ಉದ್ಘಾಟನೆಗೆ ಸರ್ಕಾರ ವಿಳಂಬ ಮಾಡುತ್ತಿದೆ.

ನಗರದಲ್ಲಿ ಪ್ರಥಮ ಎನ್ನಬಹುದಾದ ಮೆಟ್ರೋ ಡಬಲ್ ಡೆಕ್ಕರ್ ಮೇಲ್ಸೇತುವೆ ಇದಾಗಿದೆ. ಒಂದು ವಯಾಡಕ್ಟ್ ಮೇಲೆ ಮೆಟ್ರೋ ಅದರ ಕೆಳಗಿನ ವಯಾಡಕ್ಟ್ ಮೇಲೆ ವಾಹನಗಳು ಸಂಚರಿಸುವಂತೆ

ಇದನ್ನು ಬಹುಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಆದರೆ ಇದನ್ನು ಬಳಕೆ ಮಾಡುವ ಯೋಗ ಯಾವಾಗ ಸಿಲಿದೆಯೋ ಎಂಬುದೇ ಪ್ರಶ್ನೆಯಾಗಿದೆ.

ಈ ಮೇಲ್ಸೇತುವೆ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಸಿಲ್ಕ್ ಬೋರ್ಡ್ ಹಾಗೂ ಇನ್ನಿತರ ಕಡೆಗಳ ಹೆಚ್ಚಾಗುತ್ತಿರುವ ಸಂಚಾರ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಸಾಧ್ಯವಾದಲ್ಲಿ ಜೂನ್ 15ರಿಂದ ಒಂದು ಬದಿ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದರು. ಒಂದಿಲ್ಲೊಂದು ಕಾರಣದಿಂದಾಗಿ 3 ವರ್ಷ ಈ ಕಾಮಗಾರಿ ನಡೆದಿದೆ. 2021ರಲ್ಲಿಯೇ ಪೂರ್ಣಗೊಳ್ಳಬೇಕಿದ್ದ ಕಾಮಗಾರಿ ಮೂರು ವರ್ಷ ತಡವಾಗಿದೆ. ಈಗ ಪೂರ್ಣಗೊಂಡಿದ್ದರೂ ಮೇಲ್ಸೇತುವೆ ಉದ್ಘಾಟನೆ ಭಾಗ್ಯವೇ ಇಲ್ಲದಾಗಿದೆ. ಈ ಸಂಬಂಧ ನಿತ್ಯ ಈ ಭಾಗದಲ್ಲಿ ಸಂಚಾರ ದಟ್ಟಣೆಗೆ ಸಿಲುಕಿರುವ ಸವಾರರು ಬೇಸರ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಅಧಿಕಾರಿಗಳು ಇನ್ನೇನು ಡಬಲ್ ಡೆಕ್ಕರ್ ಮೇಲ್ಸೇತುವೆ ಪರಿಶೀಲನೆ ನಡೆಸಿ ಸಾರ್ವಜನಿಕರು ಮುಕ್ತಗೊಳಿಸಲಿದ್ದಾರೆ. ಮತ್ತೊಂದು ಬದಿಯ ರಸ್ತೆಯಲ್ಲಿ ಮುಂದಿನ ದಿನಗಳಲ್ಲಿ ತೆರೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಯಾವಾಗ ಎಂಬುದು ಮಾತ್ರ ಯಾರಿಗೂ ತಿಳಿಯುತ್ತಿಲ್ಲ. ಸರ್ಕಾರವೂ ಈ ವಿಷಯವಾಗಿ ಸ್ಪಷ್ಟವಾಗಿ ಹೇಳುತ್ತಿಲ್ಲ. ಬಿಎಂಆರ್‌ಸಿಎಲ್ ಅಧಿಕಾರಿಗಳೂ ಕೂಡಾ ಈ ಬಗ್ಗೆ ತಿಳಿಸುತ್ತಿಲ್ಲ. ಇದರಿಂದ ವಾಹನ ಸವಾರರು ಸರ್ಕಾರದ ಧೋರಣೆಗೆ ಕಿಡಿಕಾರುತ್ತಿದ್ದಾರೆ.

ಕೆರೆಗಳ ರಕ್ಷಣೆ: ಹೈಕೋರ್ಟ್‌ಗೆ ಮಾಹಿತಿ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿರುವ 205 ಕೆರೆಗಳ ಪುನಶ್ಚೇತನ ಮಾಡುವುದು ಮತ್ತು ಅವುಗಳ ಸಂರಕ್ಷಣೆ ಮಾಡುವುದಕ್ಕಾಗಿ ಖಾಸಗಿ ಸಂಘ–ಸಂಸ್ಥೆಗಳಿಗೆ (ಸ್ಥಳೀಯ ನಿವಾಸಿಗಳ ಸಂಘಗಳು, ಸಹಕಾರ ಸಂಘಗಳು, ಎನ್‌ಜಿಒ, ಖಾಸಗಿ ಕಂಪನಿಗಳಿಗೆ) ವಹಿಸುವ ಸಂಬಂಧ ನೀತಿ ರೂಪಿಸಲಾಗಿದೆ ಎಂದು ಹೈಕೋರ್ಟ್‌ಗೆ ಸರ್ಕಾರ ಮಾಹಿತಿ ನೀಡಿದೆ.

ನಗರದ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿಗೊಳಿಸಲು ಕೋರಿ ಸಿಟಿಜನ್ ಆಕ್ಷನ್ ಗ್ರೂಪ್ ಮತ್ತಿತರ ಸಂಘ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾ.ಕೆ.ವಿ.ಅರವಿಂದ್ ಅವರಿದ್ದ ನ್ಯಾಯ ಪೀಠಕ್ಕೆ ಮಂಗಳವಾರ ಸರ್ಕಾರದ ಪರ ವಕೀಲರು ಮಾಹಿತಿ ನೀಡಿದರು.

ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿ, ಬಿಬಿಎಂಪಿ ವ್ಯಾಪ್ತಿಯ ಕೆರೆಗಳ ಸಂರಕ್ಷಣೆಗಾಗಿ ರೂಪಿಸಿರುವ ನೀತಿಯಲ್ಲಿ ಸ್ಥಳೀಯ ನಿವಾಸಿಗಳು ಮತ್ತು ಸಂಘ ಸಂಸ್ಥೆಗಳನ್ನು ಸೇರ್ಪಡೆ ಮಾಡುವ ಸಂಬಂಧದ ಅಂಶವನ್ನು

ಸೇರ್ಪಡೆಗೊಳಿಸಲಾಗಿದೆ. ನಗರದಲ್ಲಿ ಕೆರೆಗಳ ಸಂಖ್ಯೆ ಹೆಚ್ಚಾಗಿದೆ ಅವುಗಳ ನಿರ್ವಹಣೆ ಮತ್ತು ರಕ್ಷಣೆಗಾಗಿ ವಾರ್ಷಿಕ 30 ಕೋಟಿ ರೂ.ಗಳ ವೆಚ್ಚವಾಗುತ್ತಿದೆ. ಈ ನೀತಿ ಸಾರ್ವಜನಿಕ ಹಿತಾಸಕ್ತಿಯನ್ನು ಹೊಂದಿರಲಿದೆ. ಆದರೆ, ಕೆರೆಗಳ ಮಾಲೀಕತ್ವ ಬಿಬಿಎಂಪಿ ಮತ್ತು ಸರ್ಕಾರದ ಬಳಿಯಲ್ಲಿರಲಿದೆ ಎಂದು ಪೀಠಕ್ಕೆ ವಿವರಿಸಿದರು.

ಸಿಟಿಜನ್ ಆಕ್ಷನ್ ಗ್ರೂಪ್ ಪರ ವಾದ ಮಂಡಿಸಿದ ಹಿರಿಯ ವಕೀಲ ಜೈನಾ ಕೋಥಾರಿ, ಕೆಲವು ಕೆರೆಗಳ ಸಂರಕ್ಷಣೆ ಸಂಬಂಧಿಸಿದಂತೆ ಸ್ಥಳೀಯ ನಿವಾಸಿಗಳು ಗುಂಪುಗಳನ್ನು ರಚನೆ ಮಾಡಿಕೊಂಡಿದ್ದಾರೆ. ಈ ಗುಂಪುಗಳಿಗೆ ಆಯಾ ಭಾಗದ ಕೆರೆಗಳ ಕುರಿತಂತೆ ಸಂಪೂರ್ಣ ಅರಿವಿರಲಿದೆ. ಆದರೆ, 205 ಕೆರೆಗಳಗಳನ್ನು ಖಾಸಗಿಯವರಿಗೆ ನೀಡಲು ನೀತಿ ರೂಪಿಸಿದರೆ ಅದರಲ್ಲಿ ಬಿಬಿಎಂಪಿ ಪಾತ್ರ ಏನು ಎಂಬುದು ಗೊತ್ತಾಗಬೇಕಿದೆ ಎಂದು ಪೀಠಕ್ಕೆ ತಿಳಿಸಿದರು.

ಖಾಸಗೀಕರಣಕ್ಕೆ ಮಾರ್ಗವಾಗಬಾರದು

ಕೆರೆಗಳ ಸಂರಕ್ಷಣೆ ಹೆಸರಿನಲ್ಲಿ ಸರ್ಕಾರದ ಮಾಡುತ್ತಿರುವ ಪಾಲಿಸಿ ಖಾಸಗೀಕರಣಕ್ಕೆ ಅವಕಾಶ ನೀಡುವುದಕ್ಕೆ ಮಾರ್ಗವಾಗಬಾರದು ಎಂದು ನ್ಯಾಯಪೀಠ ಇದೇ ವೇಳೆ ಮೌಖಿಕವಾಗಿ ಅಭಿಪ್ರಾಯ ಪಟ್ಟಿತು. ಜತೆಗೆ, ಯಾವ ಕೆರೆ ಸ್ವಚ್ಛಗೊಳಿಸುವ ಅಗತ್ಯವಿದೆಯೋ ಆ ಕೆರೆಗಳ ಸ್ವಚ್ಛಗೊಳಿಸುವ ಕಾರ್ಯ ಮುಂದುವರಿಯಬೇಕು. ಕೆರೆಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕು.

ಅಲ್ಲದೇ, ಸರ್ಕಾರದ ಪಾಲಿಸಿಗೆ ಸಂಬಂಧಿಸಿದಂತೆ ಅರ್ಜಿ ದಾರರು ಪರಿಶೀಲಿಸಿ ತಮ್ಮ ಸಲಹೆಗಳನ್ನು ಸಲ್ಲಿಸಬಹುದು ಎಂದು ತಿಳಿಸಿದ ನ್ಯಾಯಪೀಠ, ವಿಚಾರಣೆಯನ್ನು ಜು.31ಕ್ಕೆ ನಿಗದಿ ಪಡಿಸಿತು.

ಡಾ.ಸರೋಜಿನಿ ಮಹಿಷಿ ವರದಿ ಜಾರಿಗೆ ಆಗ್ರಹ

ಬೆಂಗಳೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದಲೇ ಡಾ. ಸರೋಜಿನಿ ಮಹಿಷಿ ವರದಿಯನ್ನು ಪರಿಷ್ಕರಿಸಲಾಗಿದೆ. ಅದನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಪ್ರಾಧಿಕಾರ ಕಾರ್ಯನ್ಮೋಖವಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಕನ್ನಡಪರ ಸಂಘಟನೆಗಳೊಂದಿಗೆ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಡಾ.ಸರೋಜಿನಿ ಮಹಿಷಿ ವರದಿ ನೀಡಿ ಹಲವು ವರ್ಷಗಳಾಗಿವೆ. ಆಗಿನ ಸಂದರ್ಭದಲ್ಲಿ ಐಟಿ, ಬಿಟಿ, ಬಹುರಾಷ್ಟ್ರೀಯ ಕಂಪನಿಗಳು ಇರಲಿಲ್ಲ. ಅಲ್ಲಿನ ಉದ್ಯೋಗದ ಸಮಸ್ಯೆಗಳ ಬಗ್ಗೆ ಮಹಿಷಿ ವರದಿಯಲ್ಲಿ ಉಲ್ಲೇಖಿಸಿಲ್ಲ. ಈ ನಿಟ್ಟಿನಲ್ಲಿ ಪ್ರಾಧಿಕಾರದಿಂದಲೇ ಡಾ. ಸರೋಜಿನಿ ಮಹಿಷಿ ವರದಿಯನ್ನು ಪರಿಷ್ಕರಿಸಲಾಗಿದೆ ಎಂದರು.

ADITYA BIRLA CAPITAL
PROTECTING INVESTING FINANCING ADVISING
ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್
ನೋಂದಾಯಿತ ಕಚೇರಿ: ಇಂಡಿಯನ್ ರೇಯಾನ್ ಕಾಂಪೌಂಡ್, ವೆರಾವಲ್, ಗುಜರಾತ್ – 362266
ಶಾಖೆ ಕಚೇರಿ: ನಂ 01/78, ಸ್ಟಾರ್ ಅವೆನ್ಯೂ, 6ನೇ ಕ್ರಾಸ್, ವಿಕ್ಟೋರಿಯಾ ಲೇಔಟ್, ಬೆಂಗಳೂರು – 560047"
"ಅನುಬಂಧ- IV-A"
[ನಿಯಮ 8 (6) ನಿಯಮವನ್ನು ನೋಡಿ]
ಸ್ಥಿರ ಆಸ್ತಿಯ ಮಾರಾಟಕ್ಕೆ ಮಾರಾಟ ಸೂಚನೆ

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಆಸಕ್ತಿ (ಜಾರಿ) 2002 ಮತ್ತು ಭದ್ರತ ಆಸಕ್ತಿ ಕಾಯ್ದೆ (ಜಾರಿ) ನಿಯಮ 2002ರ ನಿಯಮ 9 (1)ನಿಯಮ 8(6) ರೊಂದಿಗೆ ಓದಿಕೊಂಡಂತೆ, ಸ್ಥಿರ ಆಸ್ತಿಯ ಮಾರಾಟಕ್ಕೆ ಇ-ಹರಾಜು ನೋಟೀಸ್,
ಈ ಮೂಲಕ ಸಾರ್ವಜನಿಕರಿಗೆ ಸಾಮಾನ್ಯವಾಗಿ ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರರಿಗೆ (ರು) ಸೂಚನೆಯನ್ನು ನೀಡುವುದೇನೆಂದರೆ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲಗಾರನಿಗೆ ಅಡಮಾನವಿಡಲಾಗಿದೆ, ಅದರ ಭೌತಿಕ ಸ್ವಾಧೀನವನ್ನು ದಿನಾಂಕ 22.11.2023ರಂದು ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್, ಭದ್ರತಾ ಸಾಲಗಾರ, ಅವರ ಅಧಿಕೃತ ಅಧಿಕಾರಿ ತೆಗೆದುಕೊಂಡಿದ್ದಾರೆ. ರೂ. 2,45,52,360.61/– (ರೂಪಾಯಿ ಎರಡು ಕೋಟಿ ನಾಲ್ವತ್ತೈದು ಲಕ್ಷ ಐವತ್ತೆರಡು ಸಾವಿರ ಮೂರು ನೂರಾ ಅರವತ್ತು ಮತ್ತು ಅರವತ್ತೊಂದು ಮಾತ್ರ) 04.07.2024ರಂತೆ ಮತ್ತು ಭದ್ರತಾ ಸಾಲಗಾರರಿಂದ ಪಾವತಿ ದಿನಾಂಕದವರೆಗೆ ಹೆಚ್ಚಿನ ಬಡ್ಡಿ ಮತ್ತು ಇತರ ವೆಚ್ಚಗಳು ಸೇರಿ ಬಾಕಿ ವಸೂಲಿಗಾಗಿ ಸಾಲಗಾರ / ಸಹ–ಸಾಲಗಾರರು/ ಅಡಮಾನದಾರರು ಶಿವಾ ಆಟೋ ಪಾರ್ಟ್ಸ್, ಶ್ರೀ ತಿಮ್ಮೆಗೌಡ ತಿರಗನಹಳ್ಳಿ ಶ್ರೀಕಾಂತ ಮತ್ತು ಶ್ರೀಮತಿ ಚಿಕ್ಕನಹಳ್ಳಿ ಮಹೇಶ ರಾಣಿ ಅವರಿಂದ ವಸೂಲಿಗಾಗಿ ಈ ಮಾರಾಟ "ಎಲ್ಲಿದೆಯೋ ಹಾಗೇ", "ಏನಿದೆಯೋ ಹಾಗೇ" ಮತ್ತು "ಹೇಗಿದೆಯೋ ಹಾಗೇ" ಆಧಾರದ ಮೇಲೆ ದಿನಾಂಕ 30 ಜುಲೈ 2024ರಂದು ನಡೆಯಲಿದೆ. ಮೀಸಲು ಬೆಲೆ ಮತ್ತು ಪ್ರಾಮಾಣಿಕ ಹಣದ ಠೇವಣಿ ಈ ಕೆಳಗಿನಂತಿರುತ್ತದೆ:

ಸ್ಥಿರ ಆಸ್ತಿಯ ವಿವರಣೆ	ಮೀಸಲು ಬೆಲೆ	ಅರ್ನೆಸ್ಟ್ ಹಣ ಠೇವಣಿ
ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಮನೆ ಪಟ್ಟಿ ನಂ. 56 & 57, ಅಳತೆ ಪೂರ್ವ–ಪಶ್ಚಿಮ (66 +56)/2 ಅಡಿ ಮತ್ತು ಉತ್ತರ–ದಕ್ಷಿಣ (36+25)/2 ಅಡಿ, ಒಟ್ಟು ಅಳತೆ 1860 ಚದರ ಅಡಿ, ಸರ್ವೆ ನಂ. 79/2, ವಲಗೇರೆಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು, ಚಕಬಂದಿ: ಪೂರ್ವ: ಆಸ್ತಿ ಸೈಟ್ ನಂ. 58, ಪಶ್ಚಿಮ: ಆಸ್ತಿ ಸೈಟ್ ನಂ. 55, ಉತ್ತರ: ಮೈಸೂರು ರಸ್ತೆ, ದಕ್ಷಿಣ: ಆಸ್ತಿ ಸೈಟ್ ನಂ. 54.	ರೂ. 2,70,14,261/–	ರೂ. 27,01,426/–

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಭದ್ರತಾ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ: https://mortgagefinance.adityabirlacapital.com/Pages/Individual/Properties-for-Auction-under-SARFAESI-Act.aspx ಅಥವಾ https://sarfaesi.auctiontiger.net
ಸ್ಥಳ: ಬೆಂಗಳೂರು
ದಿನಾಂಕ: 09–07–2024
ಸಹಿ/– ಅಧಿಕೃತ ಅಧಿಕಾರಿ
ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್ (9686701466)



ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 5 ಕೋಟಿ ರೂ. ಮೊತ್ತದ ಚೆಕ್ ಅನ್ನು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಅವರು ಮುಖ್ಯಮಂತ್ರಿಗಳಿಗೆ ನೀಡಿದರು. ಈ ವೇಳೆ ಸಚಿವ ಜಮೀರ್ ಅಹ್ಮದ್ ಖಾನ್ ಮತ್ತಿತರರಿದ್ದರು.

ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಾದ್ಯಂತ ಚಾರ್ಟರ್ಡ್ ಅಕೌಂಟೆಂಟ್‌ನಲ್ಲಿ ಪದವಿ ಪಡೆದ 900 ಮಂದಿಗೆ ಮಣಿಪಾಲ್ ಗ್ಲೋಬಲ್ ಎಜುಕೇಷನ್ ಅಧ್ಯಕ್ಷ ಟಿ.ವಿ.ಮೋಹನದಾಸ್ ಪೈ ಅವರು ಪದವಿ ಪ್ರಮಾಣಪತ್ರ ವಿತರಿಸಿದರು. ಈ ವೇಳೆ ರಾಷ್ಟ್ರೀಯ ಲೆಕ್ಕಪರಿಶೋಧಕರ ಸಂಘದ ರಾಷ್ಟ್ರೀಯ ಪರಿಷತ್ ಸಿ.ಎ.ಕೋಥಾಸ್, ಬೆಂಗಳೂರು ಶಾಖೆ ಅಧ್ಯಕ್ಷ ಪ್ರಮೋದ್ ಆರ್ ಹೆಗಡೆ ಹಾಜರಿದ್ದರು.

ಜಾಗತಿಕ ಮಟ್ಟದಲ್ಲಿ ವಚನ ಸಾಹಿತ್ಯ ಪ್ರಚಾರ ಅಗತ್ಯ

- 250 ವಚನಕಾರರು ಬೆಳಕಿಗೆ
- ವಚನಗಳು ಬೇರೆ ಭಾಷೆಗಳಲ್ಲೂ ಅನುವಾದವಾಗಲಿ
- ಬಸವ ಕಲ್ಯಾಣಕ್ಕೆ ಸಾಕಷ್ಟು ವಿದೇಶಿಯರು ಭೇಟಿ

ಬೆಂಗಳೂರು: ವಚನ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ವಿಶೇಷ ಮನ್ನಣೆಗಳಿಸಿಕೊಂಡಿದ್ದು, ಇನ್ನು ಪರಿಣಾಮಕಾರಿಯಾಗಿ ತಿಳಿಸುವ ಅಗತ್ಯತೆ ಇದೆ ಎಂದು ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ ಸಲಹೆ ನೀಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ಹಾಗೂ ಶರಣ ಸಾಹಿತ್ಯ ಪರಿಷತ್ ಬೆಂಗಳೂರು ನಗರ ಘಟಕದ ವತಿಯಿಂದ ಗಾಂಧಿ ಭವನದಲ್ಲಿ ಆಯೋಜಿಸಲಾಗಿದ್ದ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿಯವರ ಜನ್ಮ ದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದೇಶದಲ್ಲಿ ಒಮ್ಮೆ ಕನ್ನಡ ಸಾಹಿತ್ಯ ಕುರಿತಾದ ವಿಶೇಷ ಸಮ್ಮೇಳನ ಹಮ್ಮಿಕೊಂಡಿದ್ದ ಸಂದರ್ಭದಲ್ಲಿ ಬಸವಾದಿ ಶರಣರ ವಚನಗಳ ಬಗ್ಗೆ ತಿಳಿಸಿದ ಸಂದರ್ಭದಲ್ಲಿ, ವಚನ ಸಾಹಿತ್ಯದ ಮಹತ್ವವನ್ನು ಅರಿತು ಬಸವ ಕಲ್ಯಾಣಕ್ಕೆ ಸಾಕಷ್ಟು ವಿದೇಶಿಯರು ಭೇಟಿ ನೀಡಿ ಶರಣರ ಕುರಿತಾಗಿ ಕುತೂಹಲದಿಂದ ತಿಳಿದುಕೊಂಡಿದ್ದ ಸಂಗತಿಯನ್ನು ವಿವರಿಸಿದರು.

ಒಟ್ಟು 92 ಭಾಷೆಗಳಲ್ಲಿ ವಚನಗಳು ಪ್ರಕಟಗೊಂಡಿವೆ. ಇಂದಿಗೂ ಕೂಡ 80 ಭಾಷೆಗಳಲ್ಲಿ ವಚನಗಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಗೊಳ್ಳುತ್ತಿರುವುದು ಶ್ಲಾಘನೀಯ. ಸರ್ಕಾರಗಳು ಬಸವಾದಿ ಶರಣರ



ಒಟ್ಟಾರೆ ವಚನಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸಬೇಕಾದ ಅಗತ್ಯ ಇದ್ದು, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಿದೆ ಎಂದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಫ.ಗು.ಹಳಕಟ್ಟಿಯವರು ವಚನ ಸಂರಕ್ಷಣೆಯ ಕೆಲಸ ಮಾಡದಿದ್ದರೆ ಬಸವಣ್ಣ ಕೂಡ ಬೆಳಕಿಗೆ ಬರುತ್ತಿರಲಿಲ್ಲ. ಅವರಿಂದಾಗಿ 250 ವಚನಕಾರರು ಬೆಳಕಿಗೆ ಬಂದಿದ್ದಾರೆ. ಅದಕ್ಕಿಂತ ಮೊದಲು ಕೇವಲ 40 ವಚನಕಾರರು ಮಾತ್ರ ನಾಡಿನ ಜನರಿಗೆ ಗೊತ್ತಾಗಿದ್ದರು. ಬಿಎಂಶ್ರೀ ಅವರು ಹೇಳಿದ ಹಾಗೆ ಹಳಕಟ್ಟಿ ಅವರು ವಚನ ಗುಮ್ಮಟವಾಗಿದ್ದರು ಎಂದು ತಿಳಿಸಿದರು.

ಡಾ. ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್, ಬೆಂ.ನಗರ ಘಟಕದ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ ಮತ್ತಿತರರಿದ್ದರು.

ಆಸ್ಟೀರಿಯಾ ಏರೋಸ್ಪೇಸ್ ಲಿಮಿಟೆಡ್
2ನೇ ಮತ್ತು 3ನೇ ಮಹಡಿ, ಟೆಲ್ಲಸ್ ಸ್ಪೇಸ್, ಖಾತಾ ಸಂಖ್ಯೆ 58/2782/7, ಯಲಹಂಕ ನ್ಯೂ ಟೌನ್, ಬೆಂಗಳೂರು-560064, ಕರ್ನಾಟಕ, ಭಾರತ
CIN: U74999KA2011PLC110878

ಫಾರ್ಮ್ ಸಂಖ್ಯೆ. INC-26
[ಕಂಪನಿಗಳ ನಿಯಮ 30 (ಸಂಘಟನೆ) ನಿಯಮಗಳ ಅನುಸಾರ, 2014]
ಕಂಪನಿಯ ನೋಂದಾಯಿತ ಕಛೇರಿಯನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಬದಲಾಯಿಸಲು ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಿಸಬೇಕು

ಕೇಂದ್ರ ಸರ್ಕಾರ / ಪ್ರಾದೇಶಿಕ ನಿರ್ದೇಶಕರ ಮುಂದೆ
ಸೌತ್ ಈಸ್ಟ್ ರೀಜನ್, ಹೈದರಾಬಾದ್
ಕಂಪನಿಗಳ ವಿಭಾಗ 13 ರ ಉಪ-ವಿಭಾಗ 4 ರ ವಿಷಯದಲ್ಲಿ
ಕಾಯಿದೆ 2013 ಮತ್ತು ಕಂಪನಿಗಳ (ಸಂಘಟನೆ) ನಿಯಮಗಳು,
2014 ರ ನಿಯಮ 30 ರ ಉಪ-ನಿಯಮ (5) ರ ಷರತ್ತು (ಎ)

ಮತ್ತು

ಆಸ್ಟೀರಿಯಾ ಏರೋಸ್ಪೇಸ್ ಲಿಮಿಟೆಡ್ ತನ್ನ ನೋಂದಾಯಿತ ಕಛೇರಿಯನ್ನು 2 ಮತ್ತು 3 ನೇ ಮಹಡಿಯಲ್ಲಿ ಹೊಂದಿದೆ, ಟೆಲ್ಲಸ್ ಸ್ಪೇಸ್, ಖಾತಾ ಸಂಖ್ಯೆ. 58/2782/7, ಯಲಹಂಕ ನ್ಯೂ ಟೌನ್, ಬೆಂಗಳೂರು-560064, ಕರ್ನಾಟಕ, ಭಾರತ

..........................**ಅರ್ಜಿದಾರ ಕಂಪನಿ**

ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಅರ್ಜಿದಾರ ಕಂಪನಿಯ ಜ್ಞಾಪಕ ಪತ್ರದ ಬದಲಾವಣೆಯ ದೃಢೀಕರಣವನ್ನು ಕೋರಿ, ಕಂಪನಿ ಕಾಯ್ದೆ, 2013 ರ ಸೆಕ್ಷನ್ 13 ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಅರ್ಜಿದಾರ ಕಂಪನಿಯು ಪ್ರಸ್ತಾಪಿಸುತ್ತದೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಜೂನ್ 28, 2024 ರಂದು ನಡೆದ ಅಸಾಧಾರಣ ಸಾಮಾನ್ಯ ಸಭೆಯಲ್ಲಿ ಅರ್ಜಿದಾರ ಕಂಪನಿಯು ತನ್ನ ನೋಂದಾಯಿತ ಕಛೇರಿಯನ್ನು "ಕರ್ನಾಟಕ ರಾಜ್ಯ" ದಿಂದ "ಗುಜರಾತ್ ರಾಜ್ಯ" ಕ್ಕೆ ಬದಲಾಯಿಸಲು ಅನುವು ಮಾಡಿಕೊಡುತ್ತದೆ.

ಅರ್ಜಿದಾರ ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾಪಿತ ಬದಲಾವಣೆಯಿಂದ ಆಸಕ್ತಿಯ ಪರಿಣಾಮ ಬೀರುವ ಸಾಧ್ಯತೆಯಿರುವ ಯಾವುದೇ ವ್ಯಕ್ತಿಯು MCA-21 ಪೋರ್ಟಲ್‌ನಲ್ಲಿ (www.mca.gov.in) ಹೂಡಿಕೆದಾರರ ದೂರು ನಮೂನೆಯನ್ನು ಸಲ್ಲಿಸುವ ಮೂಲಕ ಅಥವಾ ತಲುಪಿಸಲು ಕಾರಣವನ್ನು ನೀಡಬಹುದು ಅಥವಾ ವಿಳಾಸದಲ್ಲಿ ಪ್ರಾದೇಶಿಕ ನಿರ್ದೇಶಕರಿಗೆ ಅವನ/ಅವಳ ಆಸಕ್ತಿಯ ಸ್ವರೂಪ ಮತ್ತು ವಿರೋಧದ ಕಾರಣಗಳನ್ನು ತಿಳಿಸುವ ಅಫಿಡವಿಟ್ನಿಂದ ಬೆಂಬಲಿತವಾದ ಅವನ/ಅವಳ ಆಕ್ಷೇಪಣೆಗಳನ್ನು ನೋಂದಾಯಿತ ಅಂಚೆ ಮೂಲಕ ಕಳುಹಿಸಿ. ಪ್ರಾದೇಶಿಕ ನಿರ್ದೇಶಕರು, ಸೌತ್ ಈಸ್ಟ್ ರೀಜನ್, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಲ್, ತಟ್ಟಿಅನ್ನಾರಂ ಗ್ರಾಮ, ಹಯಾತ್ ನಗರ ಮಂಡಲ್, ರಂಗಾ ರೆಡ್ಡಿ ಜಿಲ್ಲೆ, ಹೈದರಾಬಾದ್-500068, ತೆಲಂಗಾಣ, ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಪ್ರತಿಯೊಂದಿಗೆ ಅರ್ಜಿದಾರ ಕಂಪನಿಯು ತನ್ನ ನೋಂದಾಯಿತ ಕಚೇರಿಯಲ್ಲಿ 2ನೇ ಮತ್ತು 3ನೇ ಮಹಡಿಯಲ್ಲಿ, ಟೆಲ್ಲಸ್ ಸ್ಪೇಸ್, ಖಾತಾ ಸಂಖ್ಯೆ. 58/2782/7, ಯಲಹಂಕ ನ್ಯೂ ಟೌನ್, ಬೆಂಗಳೂರು-560064, ಕರ್ನಾಟಕ, ಭಾರತ ದಲ್ಲಿ ಸಲ್ಲಿಸಬೇಕು.

ಅರ್ಜಿದಾರ ಕಂಪನಿಗೆ ಮತ್ತು ಪರವಾಗಿ
Sd/-
ನೀಲ್ ಕುಶಾಲ್ ಮೆಹ್ತಾ
ಸಂಪೂರ್ಣ ಸಮಯದ ನಿರ್ದೇಶಕ
DIN: 00154919
ದಿನಾಂಕ: ಜುಲೈ 10, 2024
ಸ್ಥಳ: ಬೆಂಗಳೂರು

Form No. 22
General Notice in respect of Interlocutary Application
IN THE HIGH COURT OF KARNATAKA AT BENGALURU
WRIT APPEAL NO 136/2022 (KLR-RES)
(SUBSTITUTED SERVICE OF NOTICE TO PROPOSED RESPONDENT NO.1(b, d AND) BY WAY OF PAPER PUBLICATION VIDE COURT ORDER DATED 26.06.2024)
Appellants : 1 SRI. SHIVAMURTHY
Aged About 54 Years, S/o Chandraiah, R/o Jangama Gurjenahalli Village, Sugaturu Hobli, Kolar Taluk, Kolar District-562 101. And Another.
(By Sri.Nagaraj Damodar, Advocate for appellants)
......V/s.....
Respondents : 1. SMT. MUNEMMA,
Aged About 70 Years, W/o Banappa, R/o Jangama Gurjenahalli Village, Sugaturu Hobli, Kolar Taluk, Kolar District-562 101. And Others.
(Sri.V.Vinod Reddy, Advocate for R2, proposed R1 (a) and B1(c) (VK filed) VCO dated 22.02.2022, Sri.Jeevan.J.Neeralgi, AGA accepts notice for R3 & R4)
PROPOSED LR'S R1 (b), R1 (d) and R1 (e) OF DECEASED R1
1 (b) SMT. BHAGYA, Aged About 38 Years, D/o Banappa & Muniyamma, R/at Avathi Village & Post, Devanahalli Taluk, Bengaluru Rural District-562 110.
1(d) MISS SINDU, Aged About 25 Years, D/o Ramesh & Late Shantha
1 (e) RAGHU, Aged About 23 Years, S/o Ramesh & Late Shantha, Both Are R/at Chinnakote Village. Sugaturu Hobli, Kolar Taluk, Kolar District - 562 101.
Whereas the above named Appellant has filed Writ Appeal under Section 4 of Karnataka High Court Act, 1961, praying to set aside the order dated 17.09.2021 passed in W.P.No.5586/2021.
Notice is hereby given to you to appear in this Court in person or through an advocate or through someone duly authorised to act for you in this matter **on 04.09.2024 at 10.30 A.M.** to show cause why the application should not be allowed. If you fail to appear, the application will be dealt with, heard and decided in your absence.
Issued under my hand and the seal of this court on **26.06.2024.**
BY ORDER OF THE COURT
ASSISTANT REGISTRAR

ಇಂದಿನ ಕಾರ್ಯಕ್ರಮ

10–07–2024 | ಬುಧವಾರ

ಬೆಳಗ್ಗೆ : ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ವ್ಯಂಗ್ಯಚಿತ್ರಕಾರ ಕೇಶವ್ ವೆಂಕಟರಾಘವನ್ ಅವರು ರಚಿಸಿದ ವ್ಯಂಗ್ಯಚಿತ್ರಗಳ ಪ್ರದರ್ಶನ. ಸ್ಥಳ: ಎಂ.ಜಿ.ರಸ್ತೆ, ಟ್ರಿನಿಟಿ ವೃತ್ತ, ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ. 10.00

ಸಂಜೆ : ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಭಾಗವತ ಸಪ್ತಾಹ ಕುರಿತು ವಿ.ಪವಮಾಚಾರ್ ಜಿ ಅವರಿಂದ ಉಪನ್ಯಾಸ. ಸ್ಥಳ: ಜಯನಗರ, 9ನೇ ಬಡಾವಣೆ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, 6.30

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಶ್ರೀ ಸುರಭಿ ಗಾನ ಮಂಡಲಿಯ ಸದಸ್ಯರಿಂದ 'ಭಜನೆ', 6.00. ಶ್ರೀ ರಾಮವಿಠಲಾಚಾರ್ಯರಿಂದ ಧಾರ್ಮಿಕ ಪ್ರವಚನ. ಸ್ಥಳ: ರಾಜಾಜಿನಗರ, 3ನೇ ಬಡಾವಣೆ, ಶ್ರೀರಾಮ ಮಂದಿರ.7.00

ಕುಡಿದ ಮತ್ತಿನಲ್ಲಿ ಶಾಲಾ ವಾಹನ ಚಾಲನೆ

23 ಚಾಲಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ಮದ್ಯಪಾನ ಮಾಡಿ ಶಾಲಾ ವಾಹನ ಚಲಾಯಿಸುತ್ತಿದ್ದವರ ವಿರುದ್ಧ ನಗರದಾದ್ಯಂತ ಮಂಗಳವಾರ ಬೆಂಗಳೂರು ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ 23 ಚಾಲಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಶಾಲಾ ವಾಹನ ಚಾಲಕರ ವಿರುದ್ಧ ಇತ್ತೀಚಿನ ದಿನಗಳಲ್ಲಿ ಕೆಲ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಬೆಳಗ್ಗೆ 7 ಗಂಟೆಯಿಂದ 9 ಗಂಟೆಯವರೆಗೆ 3,016 ವಾಹನಗಳನ್ನು ತಪಾಸಣೆ ನಡೆಸಿದ್ದಾರೆ. ಈ ವೇಳೆ ಪಾನಮತ್ತರಾಗಿ ಶಾಲಾ ವಾಹನ ಚಲಾಯಿಸುತ್ತಿದ್ದ 23 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಅಲ್ಲದೇ ಆರೋಪಿತ ಚಾಲಕರ ಚಾಲನಾ ಪರವಾನಗಿಯನ್ನು ಅಮಾನತುಗೊಳಿಸುವಂತೆ ಸಂಬಂಧಪಟ್ಟ ಆರ್.ಟಿ.ಓ ಕಚೇರಿಗಳಿಗೆ ವರದಿ ನೀಡಲಾಗಿದೆ.

ಇದೇ ವೇಳೆ ಚಾಲನಾ ಪರವಾನಗಿ ಇರದ 11 ವಾಹನಗಳು ಪತ್ತೆಯಾಗಿದ್ದು ಅವುಗಳನ್ನು ವಶಕ್ಕೆ ಪಡೆದು ಸಂಬಂಧಪಟ್ಟ ಆರ್.ಟಿ.ಓ ಅಧಿಕಾರಿಗಳ ವಶ ನೀಡಿದ್ದಾರೆ.

> ನಗರದ ವಿವಿಧ ಕಡೆ ತಪಾಸಣೆ ನಡೆಸಲಾಗುತ್ತಿದೆ. ಈ ವೇಳೆ 23ಕ್ಕೂ ಹೆಚ್ಚು ಶಾಲಾ ವಾಹನ ಚಾಲಕರನ್ನು ಪತ್ತೆ ಮಾಡಿ ಕಾನೂನು ಕ್ರಮಕೈಗೊಳ್ಳಲಾಗಿದೆ. ಅಲ್ಲದೇ ಎಲ್ಇಡಿ ದೀಪ ಹಾಕಿಕೊಂಡಿರುವ ವಾಹನ ಚಾಲಕರ ವಿರುದ್ಧವು ಕ್ರಮ ಕೈಗೊಳ್ಳಲಾಗಿದೆ. ಸಂಚಾರ ನಿಯಮ ಪಾಲನೆ ಮಾಡದವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತಿದೆ.
> ■ ಎಂ.ಎನ್.ಅನುಚೇತನ | ಜಂಟಿ ಆಯುಕ್ತ ಸಂಚಾರ ವಿಭಾಗ

ಬಿಎಂಟಿಸಿ ಸಿಬ್ಬಂದಿಗೆ ಆರೋಗ್ಯ ತಪಾಸಣೆ

ಬೆಂಗಳೂರು: ನಗರದಲ್ಲಿ ವಾಯುಮಾಲಿನ್ಯದ ಸಮಸ್ಯೆ ಎದುರಾಗಿದ್ದು ಹಗಲಿರುಳು ಕರ್ತವ್ಯ ನಿರ್ವಹಿಸುವ ಬಿಎಂಟಿಸಿ ಸಿಬ್ಬಂದಿಗೆ ಶ್ವಾಸಕೋಶ ಸಂಬಂಧಿತ ಕಾಯಿಲೆಯ ತಪಾಸಣೆ ಮಾಡಲಾಗಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಿಬ್ಬಂದಿ ಆರೋಗ್ಯದ ಹಿತದೃಷ್ಟಿಯಿಂದ ಸಂಸ್ಥೆಯು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಈಗಾಗಲೇ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ 40 ವರ್ಷ ಮೇಲ್ಪಟ್ಟ ಸುಮಾರು 11,200 ಸಿಬ್ಬಂದಿಗೆ ಹೃದಯ ಸಂಬಂಧಿತ ತಪಾಸಣೆಯನ್ನು ಮಾಡಲಾಗಿದೆ.

ನಗರದ ಜನದಟ್ಟಣೆಯ ಸಾರಿಗೆ ವ್ಯವಸ್ಥೆಯಲ್ಲಿ ಸದಾ ಕರ್ತವ್ಯ ನಿರತ ಸಿಬ್ಬಂದಿ ಶ್ವಾಸಕೋಶ ಸಂಬಂಧಿತ, ಉಸಿರಾಟ ಕಾಯಿಲೆ, ಅಲರ್ಜಿಗಳಿಗೆ ಸಂಬಂಧಿಸಿದ ಸ್ಕ್ರೀನಿಂಗ್ ಮತ್ತು ಸುಧಾರಿತ ಪರೀಕ್ಷೆಗಳನ್ನು ಮಾಡಬೇಕೆಂಬ ಕಾಳಜಿಯೊಂದಿಗೆ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ .ಆರ್. ಹಾಗೂ ವಾಯು ಚೆಸ್ಟ್ ಅಂಡ್ ಸ್ಲೀಪ್ ಸೆಂಟರ್ ಸ್ಥಾಪಕರು ಹಾಗೂ ನಿರ್ದೇಶಕ ಡಾ.ರವೀಂದ್ರ ಎಂ.ಮೆಹ್ತಾ ಅವರು ಚರ್ಚಿಸಿ, ಈ ತಪಾಸಣಾ ಶಿಬಿರವನ್ನು ಆಯೋಜಿಸಿದ್ದರು.

ಜಯನಗರದ ವಾಯು ಚೆಸ್ಟ್ ಅಂಡ್ ಸ್ಲೀಪ್ ಸೆಂಟರ್‌ನಲ್ಲಿ ಬಿಎಂಟಿಸಿ ಸಂಸ್ಥೆಯ 50 ಸಿಬ್ಬಂದಿಗೆ ಶ್ವಾಸಕೋಶ ಮತ್ತು ಉಸಿರಾಟದ ರೋಗಗಳ ಆರಂಭಿಕ ಪತ್ತೆಗಾಗಿ ಉಚಿತ ತಪಾಸಣಾ ಶಿಬಿರವನ್ನು ಪ್ರಾರಂಭಿಸಲಾಯಿತು. ಈ ಶಿಬಿರವು ಪ್ರತಿ ಶನಿವಾರ ಮತ್ತು ಭಾನುವಾರದಂದು ದಿನಕ್ಕೆ 50 ಸಿಬ್ಬಂದಿಗಳಂತೆ ಈ ಕೆಳಕಂಡ ಚಿಕಿತ್ಸೆಗಳನ್ನು ನಡೆಸಲಾಗುವುದು ಎಂದು ತಿಳಿಸಲಾಗಿದೆ.

ಆರೋಗ್ಯ ತಪಾಸಣೆಯಲ್ಲಿ ಅಧಿಕ ರಕ್ತದೊತ್ತಡ, ಆಮ್ಲಜನಕದ ಪ್ರಮಾಣ, ರಕ್ತದಲ್ಲಿ ಸಕ್ಕರೆಯ ಅಂಶ, ಶ್ವಾಸಕೋಶದ ಶಕ್ತಿ ಚೈತನ್ಯ, ಇ.ಎನ್.ಟಿ.(ಕಿವಿ, ಮೂಗು, ಗಂಟಲು), ಶ್ವಾಸಕೋಶದ ಎಕ್ಸರೇ, ಮತ್ತಿತರ ಉಸಿರಾಟ ಹಾಗೂ ಶ್ವಾಸಕೋಶ ಸಂಬಂಧಿತ ತಪಾಸಣೆ ಮಾಡಲಾಯಿತು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್‌ರವರು ವೆಬ್‌ಸೈಟ್ www.ireps.gov.in (Works) ಮೂಲಕ ಈ ಕೆಳಗಿನ ಕಾಮಗಾರಿಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಎಎಫ್‌ಎಸ್/2024–25/12 ದಿನಾಂಕ: 05.07.2024
ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಎಎಫ್‌ಎಸ್/2024–25/23 ದಿನಾಂಕ: 05/07/2024 **ಕಾಮಗಾರಿಯ ಹೆಸರು:** 04 ತಿಂಗಳ ಅವಧಿಗೆ ಹೊಸ ಆಕ್ಸಲ್ ಫೋರ್ಜ್ ಲೈನ್ ಕಾರ್ಯಾಚರಣೆಗಾಗಿ ಮಾನವಶಕ್ತಿಯ ಹೊರಗುತ್ತಿಗೆ. **ಅಂದಾಜು ವೆಚ್ಚ ರೂ. ಗಳಲ್ಲಿ:** 17308800.00 **ಮುಂಗಡ ಠೇವಣಿ ಹಣ ರೂ.ಗಳಲ್ಲಿ:** 236600. **ಮುಕ್ತಾಯದ ಅವಧಿ:** 04 ತಿಂಗಳುಗಳು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರು/ಎಫಿ

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಯುಟಿಎಲ್/2024–25/13 ದಿನಾಂಕ: 05.07.2024
ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಯುಟಿಎಲ್/2024–25/21 ದಿನಾಂಕ: 05/07/2024 **ಕಾಮಗಾರಿಯ ಹೆಸರು:** ಯುಟಿಲಿಟಿ ಶಾಪ್ ನಲ್ಲಿ ಎರಡು ವರ್ಷಗಳವರೆಗೆ 7 ಸಂಖ್ಯೆಗಳ ನಾನ್ ಲೂಬ್ರಿಕೇಟೆಡ್ ಕಾಂಪ್ರೆಸ್ಸರ್ 2HA4TERT–ಸಾಮರ್ಥ್ಯ–1000CFM ಗಳ ದುರಸ್ತಿ, ನಿರ್ವಹಣೆ ಮತ್ತು ಪಿಎಂಎಸ್ ಕೆಲಸ. **ಅಂದಾಜು ವೆಚ್ಚ ರೂ. ಗಳಲ್ಲಿ:** 6332274.66 **ಮುಂಗಡ ಠೇವಣಿ ಹಣ ರೂ.ಗಳಲ್ಲಿ:** 126700. **ಮುಕ್ತಾಯದ ಅವಧಿ:** 24 ತಿಂಗಳುಗಳು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರು/ಯುಟಿಎಲ್

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಎಎಂಒಎಸ್/2024–25/14 ದಿನಾಂಕ: 05.07.2024
(1) ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯುಎಫ್/ಎಂ/ಓಟಿ/ಎಎಂಒಆರ್/2024–25/26ಆರ್‌ಟಿ ದಿನಾಂಕ: 05/07/2024 **ಕಾಮಗಾರಿಯ ಹೆಸರು:** ವೀಲ್ ಶಾಪ್ ವಾರ್ಷಿಕ ನಿರ್ವಹಣೆ ಕಾರ್ಯಗಳು ಸಂಖ್ಯೆ 06 – ವಿವರಗಳು ರೈಲ್ವೇ ವೆಬ್‌ಸೈಟ್‌ನಲ್ಲಿ ಲಭ್ಯವಿವೆ. **ಅಂದಾಜು ವೆಚ್ಚ ರೂ. ಗಳಲ್ಲಿ:** 1603574.02 **ಮುಂಗಡ ಠೇವಣಿ ಹಣ ರೂ.ಗಳಲ್ಲಿ:** 32100. **ಮುಕ್ತಾಯದ ಅವಧಿ:** 12 ತಿಂಗಳುಗಳು. **(2) ಟೆಂಡರ್ ಸಂಖ್ಯೆ:** ಆರ್‌ಡಬ್ಲ್ಯುಎಫ್/ಎಂ/ಓಟಿ/ಎಂಡಬ್ಲ್ಯುಎಫ್‌ಪಿಎಸ್/2024–25/27ಆರ್‌ಟಿ ದಿನಾಂಕ: 05/07/2024 **ಕಾಮಗಾರಿಯ ಹೆಸರು:** ವೀಲ್ ಶಾಪ್ ವಾರ್ಷಿಕ ನಿರ್ವಹಣೆ ಕಾರ್ಯಗಳು ಸಂಖ್ಯೆ 10 – ವಿವರಗಳು ರೈಲ್ವೇ ವೆಬ್‌ಸೈಟ್‌ನಲ್ಲಿ ಲಭ್ಯವಿವೆ. **ಅಂದಾಜು ವೆಚ್ಚ ರೂ. ಗಳಲ್ಲಿ:** 2401313.00 **ಮುಂಗಡ ಠೇವಣಿ ಹಣ ರೂ.ಗಳಲ್ಲಿ:** 48000. **ಮುಕ್ತಾಯದ ಅವಧಿ:** 12 ತಿಂಗಳುಗಳು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರು/ಡಬ್ಲ್ಯೂ–II
ಮೇಲಿನ ಟೆಂಡರ್‌ಗಳಿಗೆ ಮುಕ್ತಾಯ ದಿನಾಂಕ ಮತ್ತು ಸಮಯ: 29/07/2024, 10.30 ಗಂಟೆಯವರೆಗೆ.

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಇಎಲ್/ಓಟಿ/ಡಬ್ಲ್ಯುಎಫ್‌ಸಿ/2024–25/15 ದಿನಾಂಕ: 09/07/2024
ಟೆಂಡರ್ ಸಂಖ್ಯೆ: ಆರ್‌ಡಬ್ಲ್ಯುಎಫ್/ಇಎಲ್/ಓಟಿ/ಡಬ್ಲ್ಯುಎಫ್‌ಸಿ/2024–25/25 ದಿನಾಂಕ: 09/07/2024 **ಕಾಮಗಾರಿಯ ಹೆಸರು:** ಕೆಳಗಿನ ಸಲಕರಣೆಗಳು/ಉಪ ಸಲಕರಣೆಗಳ ಅವಶ್ಯಕತೆ ಆಧಾರಿತ ಬದಲಿ. ಎ) ಇಎಎಫ್ – ಎ, ಬಿ & ಸಿ ನಲ್ಲಿ ವಾಟರ್ ಕೂಲ್ಡ್ ಕೇಬಲ್. ಬಿ) ಎ, ಬಿ & ಸಿ ನಲ್ಲಿ ಬಸ್ ಟ್ಯೂಬ್‌ಗಳು. ಸಿ) ಹೆಚ್ಚಿನ ಎತ್ತರದಲ್ಲಿ ಮೋಟಾರ್‌ಗಳು. **ಅಂದಾಜು ವೆಚ್ಚ ರೂ. ಗಳಲ್ಲಿ:** 767613.00 **ಮುಂಗಡ ಠೇವಣಿ ಹಣ ರೂ. ಗಳಲ್ಲಿ:** 15400 **ಟೆಂಡರ್ ಮುಕ್ತಾಯ ದಿನಾಂಕ ಮತ್ತು ಸಮಯ:** 31/07/2024, 10.30 ಗಂಟೆಗೆ. **ಮುಕ್ತಾಯದ ಅವಧಿ:** 18 ತಿಂಗಳುಗಳು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರು/ಡಬ್ಲ್ಯೂ–II
ವಿವರವಾದ ಟೆಂಡರ್ ಸೂಚನೆ ಮತ್ತು ಅರ್ಹತಾ ಮಾನದಂಡಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು

ಕೃಷಿ ವಾಣಿಜ್ಯ
ಹೊಸ ಅರಿವಿನ ಹರಿಕಾರ

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು
ಜಾಹೀರಾತಿಗಾಗಿ ಸಂಪರ್ಕಿಸಿ : Mobile : 9008774228
E-mail : skadvtblr@gmail.com

FINDING PARENTS

Name of the child: Jyothi., Name of the mother & father: Mother- Unknown Father- Unknown., **Place of Abandoned:** Found in Bogie No: 182119, Rail No: 16594, KRS, Bangalore Express at Bangalore City Railway Station., **Gender of the child:** Female., **Circumstances under which child was found and reason for admission:** Jyothi, 2 days female child was abandoned on 13/06/2024 at around 6:30 am and found by Mr. Anil Sharma (RPF Staff) in General Coach No: 182119, Rail No: 16594, KRS Bangalore Express at Bangalore City Railway Station and he has informed to the RPF post. Then from RPF post two female staff (staffs no: WC245 and WC209) have rescued the child and have taken child to the Manipal Primary Health Centre and after that they have informed to CWC-3 through Child Line. Then the child has referred to the Vani Vilas hospital by the CWC-3, Bangalore Urban for further treatment. An FIR has been filed in Bangalore Cantonment Railway Station. Bangalore City, FIR No: 0047/2024, dated on 13/06/2024. Upon the orders of the CWC-3, Bangalore Urban, the child Jyothi was admitted to St. Michael's Home on 19/06/2024. **Gross appearance on admission (malnourished, psychologically disturbed, visible disease, weight, height):** The child weight is 2.85 kgs, height is 50cm, head circumference is 32.5cm. The child is healthy. Complexion: dark., **Contact Person : Sr. Mary Preethi, Superior In charge. St. Michael's Home, No # 35, Michael Palya, Opposite C V Raman Hospital, 80 Feet Road, Indiranagar, Bangalore-560038**

ಬಹಿರಂಗ ಹರಾಜು
ಮೆ. ಸುಮನ್ ಬ್ಯಾಂಕರ್ಸ್, ಪಾನ್ ಬ್ರೋಕರ್ಸ್, ಮೋತಿ ಭವನ್, ಭಾರತ್ ಪೆಟ್ರೋಲ್ ಬಂಕ್ ಹತ್ತಿರ, ಕಲ್ಲೆರೆ ಮುಖ್ಯರಸ್ತೆ, ರಾಮಮೂರ್ತಿನಗರ, ಬೆಂಗಳೂರು-560016 ಗಿರವಿ ಅಂಗಡಿಯಲ್ಲಿ **ತಾ:** 20/09/2021 ರಿಂದ 22/05/2023 ಅವಧಿಯಲ್ಲಿ ಗಿರವಿ ಇಟ್ಟು, ವಾಯಿದೆ ಮೀರಿದ್ದು ಸಹ ಬಿಡಿಸದೆ ಇರುವ ವಸ್ತುಗಳನ್ನು (ಸೂಚನೆ:- ಕರ್ನಾಟಕ ಋಣ ಪರಿಹಾರ ಕಾಯ್ದೆಯಡಿಯಲ್ಲಿ ಬರುವ ವಸ್ತುಗಳನ್ನು ಹೊರತುಪಡಿಸಿ) ಕೆ.ಪಿ.ಬಿ. ಆಕ್ಟ್ 20(I)ನೇ ಪ್ರಕಾರ ಬಹಿರಂಗ ಹರಾಜು ಮೂಲಕ **ತಾ:** 15/07/2024 **ರಂದು ಬೆಳಗ್ಗೆ 10:00 ಗಂಟೆಗೆ** ಮೇಲ್ಕಂಡ ಗಿರವಿದಾರರ ವಿಳಾಸದಲ್ಲಿ ಶ್ರೀ ಬಿ. ಅಶೋಕ್‌ಕುಮಾರ್ (ಸರ್ಕಾರಿ ಮಾನ್ಯತೆ ಪಡೆದ ಹರಾಜುದಾರರು) ನಂ. 43, ಸೆಪ್ಪಿಂಗ್ಸ್ ರೋಡ್, ಬೆಂಗಳೂರು-560001, ಇವರು ಹರಾಜು ಮಾಡುವರು. ಹೆಚ್ಚಿನ ವಿವರಗಳಿಗಾಗಿ ಗಿರವಿದಾರರನ್ನು ಸಂಪರ್ಕಿಸಿ. (ಹರಾಜಿನಲ್ಲಿ ಭಾಗವಹಿಸುವವರು ದಯಮಾಡಿ ಸಾಮಾಜಿಕ ಅಂತರ ಮತ್ತು ಮಾಸ್ಕ್ ಧರಿಸಬೇಕೆಂದು ವಿನಂತಿ)

ಕಸ್ತೂರಿ ಓದಿರಿ

NAME CONFIRMATION
I, MANJUNATH H.V. S/o. Venkatadasappa, Aged about 47 years, Residing at Ground Floor, 008, KLSR Thunga Apartment, B.B. Road, Maheshwari Nagar, Yelahanka, Bengaluru North, Bengaluru, Karnataka - 560064. I, hereby declare that my Correct name is MANJUNATH H.V. as per my Aadhar No. 6437 7109 4770, Wrongly mentioned name as MANJUNATHA in my Passport No. L9703112. Sworn made in front of Advocate & Notary G.R. Ravichandra Reddy, Bangalore on 08-07-2024.

NAME CONFIRMATION
I, MAMATHA ANANTHA PADMANABHA, W/o. Manjunath .H.V., Aged about 39 Years, Residing at Ground Floor, 008, KLSR Thunga Apartment, B.B. Road, Maheshwari Nagar, Yelahanka, Bengaluru North, Bengaluru, Karnataka - 560 064. I, hereby declare that my Correct Name is MAMATHA ANANTHA PADMANABHA as per My PAN : BIBPA4627F, Wrongly mentioned my name as MAMATHA ANANTHA PADMANABHAN RAO in my Passport No. L9675073. Sworn made in front of Advocate & Notary G.R. Ravichandra Reddy, Bangalore on 08-07-2024.

ಕರ್ನಾಟಕ ಸರ್ಕಾರ ಸಹಕಾರ ಇಲಾಖೆ
ದಿ ಮಿಲೇನಿಯಂ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
ನಂ. 81/2, 1ನೇ ಮಹಡಿ, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು–04.
ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರೂಲ್ 38(2)(ಡಿ)ರನ್ವಯ
ಸ್ಥಿರಾಸ್ತಿಯ ಬಹಿರಂಗ ಹರಾಜು ಇಸ್ತಿಹಾರು
ದಾವಾ ಸಂಖ್ಯೆ : ಯು.ಬಿ.ಸಿ–3/ಡಿ.ಐ.ಎಸ್/507/2020/21 ದಿನಾಂಕ: 26–07–2021

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ
ದಿ ಮಿಲೇನಿಯಂ ಪತ್ತಿನ ಈ ಸಹಕಾರ ಸಂಘಕ್ಕೆ ತೀರ್ಮಾಋಣಿಯಾದ **ಶ್ರೀ ಎಸ್. ಲಲಿತಾ** ಕೋಂ. ಎಂ. ಆರ್. ಸುರೇಶ್ ರವರಿಂದ ಬರತಕ್ಕ ಸಾಲದ ಮೊಬಲಗು ದಿನಾಂಕ: 25.03.2024 ರ ಅಂತ್ಯಕ್ಕೆ **ರೂ. 48,82,038** (ನಲವತ್ತೆಂಟು ಲಕ್ಷದ ಎಂಭತ್ತೆರಡು ಸಾವಿರದ ಮುವತ್ತೆಂಟು ರೂಪಾಯಿಗಳು ಮಾತ್ರ) ಈ ಹಣ ಸಂದಾಯವಾಗುವವರೆಗೆ ಶೇ. 15% ಬಡ್ಡಿ ಮತ್ತು ಶೇ 2% ರಷ್ಟು ಸುಸ್ತಿ ಬಡ್ಡಿ, ಸಂದಾಯಕ್ಕಾಗಿ ಬಾಕಿ ವಸೂಲಾಗಬೇಕಾಗಿದ್ದು, ಈ ಬಾಕಿ ವಸೂಲಾತಿಗಾಗಿ ಸಾಲ ಪಡೆಯುವಾಗ ಡಿಕ್ರಿ ಹೋಲ್ಡರ್ ಸಂಘಕ್ಕೆ ಅಡಮಾನ ಮಾಡಿರುವ ಈ ಕೆಳಗಿನ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ಥಿರ ಸ್ವತ್ತನ್ನು **ಸ್ವತ್ತಿನ ಸ್ಥಳದಲ್ಲಿ ಅಥವಾ ಸಂಘದ ಆವರಣದಲ್ಲಿ ದಿನಾಂಕ: 05.08.2024 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ** ಸಹಕಾರ ಸಂಘಗಳ ನಿಯಮಾನುಸಾರ ಮಾರಾಟ ಷರತ್ತಿಗೆ ಒಳಪಟ್ಟು ಹರಾಜನ್ನು ನಡೆಸಲಾಗುತ್ತದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ಷರತ್ತಿಗೆ ಒಳಪಟ್ಟಂತೆ ಪಾಲ್ಗೊಳ್ಳಬಹುದು.

ಕ್ರ ಸಂ	ಬಾಕಿದಾರರ ಹೆಸರು, ವಿಳಾಸ	ಸಿಇಪಿ ಸಂಖ್ಯೆ	ಹರಾಜು ಮಾಡುವ ಸ್ವತ್ತಿನ ವಿವರ	ಹರಾಜು ಮಾಡುವ ಸ್ಥಳ	ಹರಾಜು ದಿನಾಂಕ ಹಾಗೂ ವೇಳೆ	ಸುಸ್ತಿದಾರರಿಂದ ಬರಬೇಕಾದ ಮೊಬಲಗು
01	1. ಶ್ರೀ ಎಸ್. ಲಲಿತ ಕೋಂ. ಎಂ. ಆರ್. ಸುರೇಶ್, ನಂ. 02, 2ನೇ ಮುಖ್ಯ ರಸ್ತೆ, 6ನೇ ಅಡ್ಡರಸ್ತೆ, ಮಾರುತಿ ಬಡಾವಣೆ, ತಾವರೆಕೆರೆ, ಬೆಂಗಳೂರು–29.	ಎ.ಆರ್‌ಬಿ2(45) ಸಿ.ಇ.ಪಿ./24/2021–22 ಮತ್ತು ಎ.ಆರ್.ಬಿ2(45) ಸಿ.ಇ.ಪಿ./25/2021–22 	ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಒಳಗೊಂಡಂತೆ ಪಶ್ಚಿಮ ಭಾಗದ ಆಸ್ತಿ (ಹಳೆ ನಂ. 2) ಹೊಸ ನಂ. 06, ಹಳೆ ನಂ. 1/2/2, ಆಸ್ತಿಯು ತಾವರೆಕೆರೆ ಗ್ರಾಮ, ಪ್ರಸ್ತುತ ಕಾರ್ಪೊರೇಷನ್ ನಂ. 2, ತಾವರೆಕೆರೆ, ಗುರಪ್ಪನಪಾಳ್ಯ, ಪಿಐಡಿ ನಂ. 64–156–06, 35/58ನೇ ವಿಭಾಗ, ಪ್ರಸ್ತುತ ವಾರ್ಡ್ ನಂ. 64, ಬೆಂಗಳೂರು ಸಿಟಿ ಕಾರ್ಪೊರೇಷನ್, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 30 ಅಡಿ, ಉತ್ತರದಿಂದ ದಕ್ಷಿಣಕ್ಕೆ : 20 ಅಡಿ, ಒಟ್ಟು ವಿಸ್ತೀರ್ಣ 600 ಚದರ ಅಡಿ. **ಚಕ್ಕುಬಂದಿ : ಪೂರ್ವಕ್ಕೆ :** ಅದೇ ಆಸ್ತಿಯ ಉಳಿದ ಭಾಗ ಆಸ್ತಿ ನಂ. 3, **ಪಶ್ಚಿಮಕ್ಕೆ :** ರಸ್ತೆ, **ಉತ್ತರಕ್ಕೆ :** ಖಾಸಗಿ ಆಸ್ತಿ, **ದಕ್ಷಿಣಕ್ಕೆ:** ಅದೇ ಆಸ್ತಿಯ ಉಳಿದ ಭಾಗ ಆಸ್ತಿ ನಂ. 2.	ಸ್ವತ್ತಿನ ಸ್ಥಳದಲ್ಲಿ	ದಿನಾಂಕ 05.08.2024 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ	ರೂ. 37,22,952/– ಹಾಗೂ ದಿನಾಂಕ 25.03.2024 ರಿಂದ ಮುಂದುವರೆದ ಬಡ್ಡಿ ಹಾಗೂ ಇತರೆ ಇ.ಪಿ. ಫೀ ಖರ್ಚು ವೆಚ್ಚ ಪಾವತಿಸ ಬೇಕಾಗಿರುತ್ತದೆ.

ಹೆಚ್ಚಿನ ವಿವರಗಳಿಗೆ : ಮೇಲ್ಕಂಡ ಸಂಘದ ಮುಖ್ಯ ಕಾರ್ಯನಿರ್ವಾಹಕರಾಗಲೀ ಅಥವಾ ಮಾರಾಟಾಧಿಕಾರಿಗಳವರಲ್ಲಾಗಲೀ ಪಡೆಯಬಹುದು ಹಾಗೂ ಡಿಕ್ರಿ ಅವಾರ್ಡಿನ ತಾರೀಖಿನಿಂದ ಹರಾಜು ತಾರೀಖಿನವರೆಗೆ ಡಿಕ್ರಿ ಮೊಬಲಗು ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಸುಸ್ತಿದಾರರಿಂದ ಬರಬೇಕಾಗಿರುತ್ತದೆ (ಅಂದಿನಿಂದ ಅವರು ಪಾವತಿ ಮಾಡಿರುವುದನ್ನು ಕಳೆದು) ಸದರೀ ಹರಾಜನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ನಿಯಮ 38(2) 2ನೇ ವಲಯ, ಮಲ್ಲೇಶ್ವರಂ, ಬೆಂಗಳೂರು, ಇವರ ಹುಕುಂ ಮೇರೆಗೆ ಹೊರಡಿಸಲಾಗಿದೆ. ದೂರವಾಣಿ : 8147195877 & 9036903199

ಷರತ್ತುಗಳು :
1. ಸಾರ್ವಜನಿಕ ಹರಾಜಿನ ಮೂಲಕ ಅತ್ಯಂತ ಹೆಚ್ಚು ಸವಾಲು ಕೂಗಿದವನಿಗೆ ಸ್ವತ್ತನ್ನು ಈ ಕೆಳಕಂಡ ಷರತ್ತುಗಳಿಗೆ ಅನುಗುಣವಾಗಿ ಮಾರಾಟ ಮಾಡಲಾಗುವುದು. ಹರಾಜಿನಲ್ಲಿ ಬಂದ ಬೆಲೆಯು ಅತ್ಯಂತ ಕಡಿಮೆ ಎಂದು ಕಂಡುಬಂದಲ್ಲಿ ಅಥವಾ ಇತರ ಕಾರಣಗಳಿಗಾಗಿ ಅತ್ಯಂತ ಹೆಚ್ಚಿನ ಸವಾಲನ್ನು ನಿರಾಕರಿಸುವುದು ಮಾರಾಟಾಧಿಕಾರಿಯ ವಿವೇಚನೆಗೆ ಒಳಪಟ್ಟಿರುತ್ತದೆ.
2. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚಿತವಾಗಿ ರೂ. 20,000–00 (ಇಪ್ಪತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಪ್ರಾರಂಭಿಕ ಠೇವಣಿಯನ್ನು ಪಾವತಿಸತಕ್ಕದ್ದು, ಈ ಹಣವನ್ನು ನಗದಾಗಿ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಸಲ್ಲಿಸುವ ಮೂಲಕ ಪಾವತಿಸುವುದು.
3. ಯಶಸ್ವಿಯಾದ ಬಿಡ್ಡುದಾರರು ಹರಾಜಿನಲ್ಲಿ ಖರೀದಿಸಲಾದ ಸ್ಥಿರ ಸ್ವತ್ತಿನ ಬೆಲೆಯ ಶೇ: 15% ರಷ್ಟು ಹಣವನ್ನು ಖರೀದಿ ಸಮಯದಲ್ಲಿ ಖರೀದಿದಾರನು ಸಂದಾಯ ಮಾಡತಕ್ಕದ್ದು. ಖರೀದಿ ಹಣದ ಉಳಿದ ಭಾಗವನ್ನು ಮತ್ತು ಮಾರಾಟ ಪ್ರಮಾಣ ಪತ್ರಕ್ಕೆ ಸಾಮಾನ್ಯ ಸ್ಟ್ಯಾಂಪು ಅಂಟಿಸಲು ಅಗತ್ಯವಾದ ಮೊಬಲಗನ್ನು ಮಾರಾಟದ ದಿನಾಂಕದಿಂದ 45 ದಿವಸಗಳೊಳಗೆ ಸಂದಾಯ ಮಾಡತಕ್ಕದ್ದು. ಮೇಲೆ ನಮೂದಿಸಿದ ಅವಧಿಯೊಳಗೆ ಖರೀದಿ ಹಣದ ಉಳಿದ ಭಾಗವನ್ನು ಸಂದಾಯ ಮಾಡಲು ತಪ್ಪಿದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಸಂದಾಯ ಮಾಡಲು ತಪ್ಪಿದ ಖರೀದಿದಾರನು ಆ ಸ್ವತ್ತಿಗೆ ಅಥವಾ ಅದನ್ನು ಆ ತರುಬಾಯ ಮಾರಾಟ ಮಾಡಬಹುದಾದ ಹಣದ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಹೊಂದಿರುವ ಎಲ್ಲಾ ಕ್ಲೈಮ್‌ಗಳನ್ನು ಕಳೆದುಕೊಳ್ಳುವನು.
4. ಮಾರಾಟಕ್ಕೆ ಮೊದಲು ತೀರ್ಮಾಋಣಿಯು ಅಥವಾ ಅವನ ಪರವಾಗಿ ವರ್ತಿಸುವ ಯಾವನೇ ವ್ಯಕ್ತಿಯು ಅಥವಾ ಮಾರಾಟ ಮಾಡಲು ಉದ್ದೇಶಿಸಿದ ಸ್ವತ್ತಿನಲ್ಲಿ ಹಿತಾಸಕ್ತಿ ಕ್ಲೈಮ್ ಮಾಡುವ ಯಾವನೇ ವ್ಯಕ್ತಿಯು, ಬಾಕಿ ಇರುವ ಪೂರ್ಣ ಮೊಬಲಗನ್ನು, ಬಡ್ಡಿ, ಭತ್ಯೆ, ಸ್ವತ್ತನ್ನು ಮಾರಾಟಕ್ಕೆ ತರುವಲ್ಲಿ ತಗುಲಿದ ವೆಚ್ಚಗಳು, ಜಪ್ತಿಯ ವೆಚ್ಚಗಳು ಸಹಿತ ಸಂದಾಯ ಮಾಡಿದಲ್ಲಿ ಹರಾಜನ್ನು ನಿಲ್ಲಿಸಲಾಗುವುದು.
5. ಹರಾಜು ಸಮಯದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಸ್ವಂತಕ್ಕಾಗಿ ಬಿಡ್ಡು ಮಾಡುತ್ತಿದ್ದಾರೆಯೋ ಅಥವಾ ಅನ್ಯರ ಪರವಾಗಿ ಮಾಡುತ್ತಿದ್ದಾರೆಯೋ ಎಂಬ ಬಗ್ಗೆ ಮಾಹಿತಿಯನ್ನು ಮಾರಾಟಾಧಿಕಾರಿಗಳು ಅಪೇಕ್ಷಿಸಲ್ಪಡಬಹುದು. ಅನ್ಯರ ನಿಮಿತ್ತ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಅನ್ಯರಿಂದ ಈ ಬಗ್ಗೆ ಅವರ ಅನುಮತಿಯನ್ನು ತಾವು ಪಡೆದುಕೊಂಡಿರುವ ಬಗ್ಗೆ ಅಧಿಕಾರ ಪತ್ರವನ್ನು ಹಾಜರು ಪಡಿಸುವುದು. ಈ ಪ್ರಕಾರ ಹಾಜರುಪಡಿಸದಿದ್ದರೆ ಅವರು ಬಿಡ್ಡಿನಲ್ಲಿ ಭಾಗವಹಿಸಲು ಅವಕಾಶವಿಲ್ಲ.
6. ಈ ಹರಾಜು ವಸೂಲಾಧಿಕಾರಿ/ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸ್ಥಿರೀಕರಣ ಮಾಡುವವರೆಗೆ ಖಾಯಂ ಆಗುವುದಿಲ್ಲ. ಸ್ಥಿರೀಕರಣ ಸಮಯದಲ್ಲಿ ಅಪೇಕ್ಷಿಸುವ ಮಾಹಿತಿ, ದಾಖಲಾತಿಗಳನ್ನು ಒದಗಿಸಿದರೆ ವಸೂಲಾಧಿಕಾರಿಗಳ/ಸಹಕಾರ ಸಂಘಗಳ ಸಹಾಯಕ ನಿಬಂಧಕರ ಸಹಿ ಮತ್ತು ಮೊಹರಿನೊಂದಿಗೆ ಮಾರಾಟವನ್ನು ಸ್ಥಿರೀಕರಣಗೊಳಿಸಿ, ಮಾರಾಟ ಪ್ರಮಾಣ ಪತ್ರವನ್ನು ಕೊಡಲಾಗುವುದು.
7. ಸ್ವತ್ತಿನ ವಿವರಣೆ ಅಥವಾ ಅವುಗಳ ಅಂದಾಜು ಮಾಡಲಾಗಿರುವ ವಿಸ್ತೀರ್ಣದ ವಿಷಯದಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಇರುವ ತಪ್ಪುಗಳಿಗೆ ಈ ನ್ಯಾಯಾಲಯ ಜವಾಬ್ದಾರಿಯಲ್ಲ. ಸ್ವತ್ತು ಯಾವ ಸ್ಥಳದಲ್ಲಿ, ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಇದನ್ನು ಬಿಡ್ಡುದಾರರು ಮೊದಲೇ ಅರಿತು ಬಿಡ್ಡಿನಲ್ಲಿ ಭಾಗವಹಿಸುವುದು.
8. ವಸೂಲಾಧಿಕಾರಿ/ಮಾರಾಟಾಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಈ ಹರಾಜು ಪ್ರಕ್ರಿಯೆಯನ್ನು ಯಾವುದೇ ಮುನ್ಸೂಚನೆ ಇಲ್ಲದೆ ಮುಂದೂಡಬಹುದು ಅಥವಾ ರದ್ದುಗೊಳಿಸಬಹುದು.
9. ಹೆಚ್ಚಿನ ಮಾಹಿತಿಗಾಗಿ ಈ ನ್ಯಾಯಾಲಯ ಅಥವಾ ಸಂಘದ ಮುಖ್ಯ ಕಾರ್ಯನಿರ್ವಾಹಕರನ್ನು ಸಂಪರ್ಕಿಸಬಹುದು.
10. ಈ ಸ್ವತ್ತಿನ ಬಗ್ಗೆ ಕಾನೂನು ತೊಡಕುಗಳಿದ್ದರೆ ಇಲಾಖೆ ಅಥವಾ ಸಂಘದವರು ಜವಾಬ್ದಾರಿಯಾಗಿರುವುದಿಲ್ಲ.

ಸ್ಥಳ: ಬೆಂಗಳೂರು
ದಿನಾಂಕ: 13.06.2024
ಸಹಿ/– ಮಾರಾಟಾಧಿಕಾರಿ
ದಿ ಮಿಲೇನಿಯಂ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು–560 004.